# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 74 |
| ಮಾನ್ಯ ಸದಸ್ಯರ ಹೆಸರು | ಶ್ರೀ ಟಿ.ಎ. ಶರವಣ |
| ಉತ್ತರಿಸಬೇಕಾದ ದಿನಾಂಕ | 09.12.2024 |
| ಉತ್ತರಿಸುವ ಸಚಿವರು | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೆಂಗಳೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ವ್ಯಾಪ್ತಿಯಲ್ಲಿ ಬರುವ ಬೌರಿಂಗ್, ವಿಕ್ಟೋರಿಯಾ, ಮಿಂಟೋ, ವಾಣಿ ವಿಲಾಸ ಮತ್ತು ಪಿ.ಎಂ.ಎಸ್.ಎಸ್.ವೈ ಆಸ್ಪತ್ರೆಗಳಲ್ಲಿ ಬಡ ರೋಗಿಗಳಿಗೆ ವಿಧಿಸುವ ದರ ಶೇಕಡಾ 20ರಷ್ಟು ಹೆಚ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ದರ ಏರಿಕೆಗೆ ಕಾರಣಗಳು ಏನು; (ವಿವರ ನೀಡುವುದು) | ಬಂದಿದೆ.<br><br>ಪ್ರಸ್ತುತ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಅಧೀನದ ಆಸ್ಪತ್ರೆಗಳಲ್ಲಿ ಪಡೆಯಲಾಗುತ್ತಿದ್ದ ಸೇವೆಗಳ ದರಗಳನ್ನು ಪರಿಷ್ಕರಿಸಿ ಆರು ವರ್ಷಗಳು ಕಳೆದಿರುತ್ತದೆ. ದರಗಳ ಪರಿಷ್ಕರಣೆಯನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಕೈಗೊಳ್ಳಬೇಕಾಗಿದ್ದು, ಕೋವಿಡ್-19 ಸಾಂಕ್ರಮಿಕ ರೋಗದಿಂದಾಗಿ ದರಗಳನ್ನು ಪರಿಷ್ಕರಣೆ ಮಾಡಲು ಸಾಧ್ಯವಾಗಿರುವುದಿಲ್ಲ.<br><br>ಪ್ರಸ್ತುತ ದಿನಗಳಲ್ಲಿ ಎಎಂಸಿ / ಸಿಎಂಸಿ, ಔಷಧ ಮತ್ತು ರಾಸಾಯನಿಕಗಳ ದರಗಳ ಹೆಚ್ಚಳದಿಂದಾಗಿ, ಸದರಿ ದರಪರಿಷ್ಕರಣೆಯನ್ನು ಸಂಸ್ಥೆಯ ಹಾಗೂ ಆಸ್ಪತ್ರೆಗಳ ಆರ್ಥಿಕ ಸ್ವಾಮ್ಯತೆಯನ್ನು ಹಾಗೂ ಸಂಪನ್ಮೂಲವನ್ನು ಬಲಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿರುತ್ತದೆ.<br><br>ದರಪರಿಷ್ಕರಣೆಯಿಂದ ವಸೂಲು ಮಾಡುವ ಆರ್ಥಿಕ ಸಂಪನ್ಮೂಲದಿಂದ ಚಿಕಿತ್ಸೆಗೆ ಬರುವ ರೋಗಿಗಳಿಗೆ ಉತ್ತಮ ಚಿಕಿತ್ಸಾ ಸೌಲಭ್ಯವನ್ನು ಒದಗಿಸುವುದು ಹಾಗೂ ಸದರಿ ದರಪರಿಷ್ಕರಣೆಯಲ್ಲಿ ಆಸ್ಪತ್ರೆಗೆ ಒಳರೋಗಿಗಳಾಗಿ ದಾಖಲಾಗುವರಿಗೆ ಉಚಿತ ಪಥ್ಯಾಹಾರವನ್ನು ನೀಡಲಾಗುತ್ತಿರುತ್ತದೆ. |
| ಆ) | ರಾಜ್ಯದ ಬಡ ಜನತೆಯೇ ಹೆಚ್ಚಾಗಿ ಭೇಟಿ ನೀಡುವ ಈ ಆಸ್ಪತ್ರೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಶುಲ್ಕ ಹೆಚ್ಚಳದಿಂದ ಬಡವರಿಗೆ ತೊಂದರೆ ಆಗುವುದಿಲ್ಲವೇ; ಈ ಆದೇಶವನ್ನು ವಾಪಸ್ ಪಡೆಯುವ ಉದ್ದೇಶ ಸರ್ಕಾರದ | ಬಿಪಿಎಲ್ ಕಾರ್ಡು ಹೊಂದಿರುವ ರೋಗಿಗಳಿಗೆ ಉಚಿತವಾಗಿಯೇ ಚಿಕಿತ್ಸೆಯನ್ನು ನೀಡಲಾಗುತ್ತಿರುತ್ತದೆ ಹಾಗೂ ಕಡು ಬಡರೋಗಿಗಳಿಗೆ ಆಸ್ಪತ್ರೆಯ ನಿರ್ದೇಶಕರು / ವೈದ್ಯಕೀಯ ಅಧೀಕ್ಷಕರು / ಸ್ಥಾನೀಯ ವೈದ್ಯಾಧಿಕಾರಿಗಳ ಹಂತದಲ್ಲಿ ಉಚಿತವಾಗಿ ಚಿಕಿತ್ಸೆಯನ್ನು ನೀಡಲು |

| | | |
|---|---|---|
| | ಮುಂದೆ ಇದೆಯೇ: ಇದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು: (ವಿವರ ನೀಡುವುದು) | ಪರಿಶೀಲಿಸಿ ಉಚಿತ ಚಿಕಿತ್ಸೆ ನೀಡುವ ವ್ಯವಸ್ಥೆ ಇರುತ್ತದೆ.<br>ಸದರಿ ದರಪರಿಷ್ಕರಣೆಯು ಖಾಸಗಿ ಆಸ್ಪತ್ರೆಗಳಿಗೆ ಹೋಲಿಕೆ ಮಾಡಿದ್ದಲ್ಲಿ 1/3 ಭಾಗದಷ್ಟಿರುತ್ತದೆ. ಈ ಆದೇಶವನ್ನು ವಾಪಸ್ ಪಡೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| (ಇ) | ಈ ಆಸ್ಪತ್ರೆಗಳ ಲ್ಯಾಬ್ ಗಳಿಗೆ ರಕ್ತ ತಪಾಸಣೆ, ಸ್ಕ್ಯಾನಿಂಗ್ ಮತ್ತಿತರೆ ಉದ್ದೇಶಗಳಿಗೆ ಭೇಟಿ ಕೊಡುವ ಬೇರೆ ಆಸ್ಪತ್ರೆಗಳ ರೋಗಿಗಳಿಗೆ ಹೆಚ್ಚುವರಿಯಾಗಿ ಒಂದು ಸಾವಿರ ರೂಪಾಯಿ ವರೆಗೆ ಶುಲ್ಕ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ. ಇದನ್ನು ರದ್ದು ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬಂದಿದೆ.ಮೇಲಿನ ಪ್ರಶ್ನೆ "ಅ" ರಲ್ಲಿ ಉತ್ತರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಇದನ್ನು ರದ್ದು ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಎಂಇಡಿ 574 ಎಂಎಂಸಿ 2024

(ಡಾ|| ಶರಣಪ್ರಕಾಶ ಆರ್. ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು